ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 ದಿನಾಂಕ: 2–10–2015

# KIND ATTENTION : MEDIA REPRESENTATIVES

THE CHANCELLOR OF FEDERAL REPUBLIC OF GERMANY MRS ANGELA MERKEL WILL BE ARRIVING FOR A TWO-DAY OFFICIAL STATE VISIT TO BENGALURU ON OCTOBER 5. THE PRIME MINISTER OF INDIA MR NARENDRA MODI WILL ALSO BE VISITING BANGALURU ON OCTOBER 6. BOTH THE LEADERS PARTICIPATE AND SHARE THE DAIS AT BOSCH FACTORY IN ADUGODI AND NASSCOM EVENT AT HOTEL LEELA PALACE.

ACCREDITED JOURNALISTS AND CAMERA PERSONS, REPRESENTING IMPORTANT PRINT AND ELECTRONIC MEDIA, MAY COLLECT SECURITY PASSES FROM THE OFFICE OF THE DEPUTY COMMISSIONER OF POLICE ( V V I P SECURITY ) ON SUBMISSION OF THEIR TWO PASSPORT SIZE PHOTOGRAPHS AND AN INVITE FROM THE ORGANIZERS, WHICH IS A MUST.

IN VIEW OF VISIT OF THE EXECUTIVE HEADS OF TWO NATIONS, SECURITY HAS BEEN GIVEN TOP PRIORITY AND MEDIA PERSONS WITHOUT ACCREDITATION CARDS WILL NOT BE ALLOWED TO THE VENUE OF THE EVENTS,

DIRECTOR,
DEPARTMENT OF INFORMATION AND PUBLIC RELATIONS
GOVERNMENT OF KARNATKA
BENGALURU - 560 001.

# ಪತ್ರಿಕಾ ಪ್ರಕಟಣೆ

## ವಾರ್ತಾಸೌಧದಲ್ಲಿ ಮುಖ್ಯಮಂತ್ರಿಗಳಿಂದ ಮಹಾತ್ಮಗಾಂಧೀ ಪುತ್ಥಳಿ ಲೋಕಾರ್ಪಣೆ

ಬೆಂಗಳೂರು, ಅಕ್ಟೋಬರ್ 2 (ಕರ್ನಾಟಕ ವಾರ್ತೆ)

ಮಹಾತ್ಮಾಗಾಂಧಿ ಜನ್ಮ ದಿನಾಚರಣೆಯ ಅಧಿಕೃತ ಸಮನ್ವಯ ಇಲಾಖೆಯಾದ ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಬೆಂಗಳೂರಿನ ಭಗವಾನ್ ಮಹಾವೀರ್ ರಸ್ತೆಯಲ್ಲಿರುವ ವಾರ್ತಾಸೌಧದಲ್ಲಿ ನೂತನವಾಗಿ ಪ್ರತಿಷ್ಠಾಪಿಸಲಾಗಿರುವ 'ಹಸ್ತದಲ್ಲಿ ಪತ್ರಿಕೆ ಹಿಡಿದು ಸಾಗುವ ಭಂಗಿಯಲ್ಲಿರುವ ಮಹಾತ್ಮ ಗಾಂಧಿ ಪುತ್ಥಳಿ'ಯನ್ನು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಬೆಳಿಗ್ಗೆ ಅನಾವರಣಗೊಳಿಸಿ ಪುಷ್ಪಾರ್ಚನೆ ಮಾಡಿದರು.

ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಹಜ್ ಖಾತೆ ಸಚಿವ ಆರ್. ರೋಷನ್ ಬೇಗ್ ಅವರು ಅಧ್ಯಕ್ಷತೆ ವಹಿಸಿದ್ದರು.

ಸಮಾರಂಭದಲ್ಲಿ ಮಕ್ಕಳ ಮತ್ತು ಮಹಿಳಾ ದೌರ್ಜನ್ಯ ವರದಿಗಳ ಪರಿಶೀಲನಾ ಸಮಿತಿ ಅಧ್ಯಕ್ಷ ಹಾಗೂ ಶಾಸಕ ವಿ.ಎಸ್. ಉಗ್ರಪ್ಪ, ಕನ್ನಡ ಮತ್ತು ಸಂಸ್ಕೃತಿ ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿ ಡಾ: ಎನ್.ಎಸ್. ಚನ್ನಪ್ಪಗೌಡ, ಕರ್ನಾಟಕ ಗಾಂಧಿ ಭವನದ ಅಧ್ಯಕ್ಷ ಹಾಗೂ ಗಾಂಧಿ ಸೇವಾ ಪುರಸ್ಕೃತ ಡಾ: ಹೊ. ಶ್ರೀನಿವಾಸಯ್ಯ, ಹಿರಿಯ ಚಲನಚಿತ್ರ ನಿರ್ದೇಶಕ ಭಗವಾನ್, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಎಸ್.ವಿ. ರಾಜೇಂದ್ರಸಿಂಗ್ ಬಾಬು, ಹಿರಿಯ ಅಧಿಕಾರಿಗಳು, ನಿವೃತ್ತ ಹಿರಿಯ ಅಧಿಕಾರಿಗಳು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್. ಆರ್. ವಿಶುಕುಮಾರ್ ಎಲ್ಲರನ್ನು ಸ್ವಾಗತಿಸಿದರು. ವಾರ್ತಾ ಇಲಾಖೆಯ ಹಿರಿಯ ಅಧಿಕಾರಿಗಳೂ ಆದ ಜಂಟಿ ನಿರ್ದೇಶಕರಾದ ಎಂ. ರವಿಕುಮಾರ್, ಎನ್. ಭೃಂಗೀಶ್, ಹಿರಿಯ ಉಪ ನಿರ್ದೇಶಕರಾದ ಹೆಚ್.ಬಿ. ದಿನೇಶ್, ಎಸ್.ವಿ. ಲಕ್ಷ್ಮೀನಾರಾಯಣ್, ಮದ್ಯಪಾನ ಸಂಯಮಮಂಡಳಿಯ ಕಾರ್ಯದರ್ಶಿ ಪಿ.ಎಂ. ಚಂದ್ರಮೌಳಿ ಮುಂತಾದ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೆ ಮೊದಲು ವಾರ್ತಾಸೌಧದಲ್ಲಿ ರಾಮಚಂದ್ರ ಹಡಪದ್ ಮತ್ತು ತಂಡದವರಿಂದ ಗಾಂಧಿ ಪ್ರಿಯ ಭಜನೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಬಾಬು:ಕೆಎಂ

# ವಿಧಾನ ಸೌಧದ ಬಳಿ ಮಹಾತ್ಮಾಗಾಂಧಿ, ಲಾಲ್‌ಬಹದ್ದೂರ್ ಶಾಸ್ತ್ರೀ ಪ್ರತಿಮೆಗಳ ಬಳಿ ಮುಖ್ಯಮಂತ್ರಿಗಳಿಂದ ಮಾಲಾರ್ಪಣೆ

**ಬೆಂಗಳೂರು, ಅಕ್ಟೋಬರ್ 2 (ಕರ್ನಾಟಕ ವಾರ್ತೆ)**

ಮಹಾತ್ಮಾಗಾಂಧಿ ಜಯಂತಿ ಅಂಗವಾಗಿ ಇಂದು ಬೆಂಗಳೂರಿನ ವಿಧಾನ ಸೌಧದ ಬಳಿ ಇರುವ ಮಹಾತ್ಮಾಗಾಂಧಿ ಅವರ ಮತ್ತು ಮಾಜಿ ಪ್ರಧಾನಿ ದಿವಂಗತ ಲಾಲ್‌ಬಹದ್ದೂರ್ ಶಾಸ್ತ್ರೀಗಳ ಪ್ರತಿಮೆ ಬಳಿ ಇರಿಸಲಾಗಿದ್ದ ಅವರುಗಳ ಭಾವಚಿತ್ರಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

## ಬಯೋ ಡಿಸೇಲ್ ಬಸ್‌ಗೆ ಚಾಲನೆ:

ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೂತನವಾಗಿ ಹೊರತಂದಿರುವ ಬಯೋಡೀಸೆಲ್ ಚಾಲನೆಗೆ ಟೇಪ್ ಕತ್ತರಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಚಾಲನೆ ನೀಡಿದರು.

ಇದೇ ಸಂದರ್ಭದಲ್ಲಿ ಬೆಂಗಳೂರು ನಗರ ಉಸ್ತುವಾರಿ ಸಚಿವರಾದ ಸಾರಿಗೆ ಸಚಿವ ಆರ್. ರಾಮಲಿಂಗಾರೆಡ್ಡಿ, ಗೃಹ ಸಚಿವ ಕೆ. ಜೆ. ಜಾರ್ಜ್, ವಿಧಾನ ಪರಿಷತ್ ಸಭಾಪತಿ ಡಿ.ಎಸ್. ಶಂಕರಮೂರ್ತಿ, ವಿಧಾನ ಪರಿಷತ್ ಸದಸ್ಯ ವಿ.ಎಸ್. ಉಗ್ರಪ್ಪ, ವಿ. ವೆಂಕಟೇಶ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಕೌಶಿಕ್ ಮುಖರ್ಜಿ, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ನರಸಿಂಹರಾಜು, ಆಡಳಿತ ಸುಧಾರಣಾ ಮತ್ತು ಸಿಬ್ಬಂದಿ ಇಲಾಖೆಯ ಡಾ: ರಮಣರೆಡ್ಡಿ, ಸರ್ಕಾರದ ಹಿರಿಯ ಅಧಿಕಾರಿಗಳು, ಸಾರಿಗೆ ಇಲಾಖೆಯ ಹಿರಿಯ ಅಧಿಕಾರಿಗಳು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಉಪಸ್ಥಿತರಿದ್ದರು.

ಬಾಬು/ಕೆಪಿ/ಕೆಎಂ